ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ ಪ್ರ.ದ.ನ್ಯಾ.ದಂ., ರವರ ನ್ಯಾಯಾಲಯದಲ್ಲಿ, ತರೀಕೆರೆ.

ಸಿಸಿ ನಂಬರ್ **1014/2023**

| | | | |
|---|---|---|---|
| ಸಾಕ್ಷಿಯ ಹೆಸರು | : ಬಸನಗೌಡ | ಸಿ.ಡಬ್ಲ್ಯು 8 | |
| ತಂದೆಯ ಹೆಸರು | : ಶಿವಶಂಕರ್ | ಪಿ.ಡಬ್ಲ್ಯು 3 | |
| ವಯಸ್ಸು | : 34 ವರ್ಷ | | |
| ಉದ್ಯೋಗ | : ಪಿ.ಎಸ್.ಐ | | |
| ವಾಸ ಸ್ಥಳ | : ತರೀಕೆರೆ | | |

ದಿನಾಂಕಃ**03-12-2024** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು

ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ. ರವರಿಂದಃ-

ನಾನು 2022 ನೇ ಸಾಲಿನಿಂದ ಈ ದಿನದ ವರೆಗೆ ತರೀಕೆರೆಯಲ್ಲಿ ಪಿ.ಎಸ್.ಐ ಎಂದು ಕೆಲಸ ಮಾಡುತ್ತಿದ್ದೇನೆ.

ಈ ಪ್ರಕರಣದಲ್ಲಿ ದಿನಾಂಕ 27-02-2023 ರಂದು ಈ ಪ್ರಕರಣದ ಕಡತವನ್ನು ಚಾಸಾ-2 ರವರಿಂದ ಪಡೆದುಕೊಂಡು ಪರಿಶೀಲನೆ ಮಾಡಿದ್ದೇನೆ. ಅದೇ ದಿನ ಅಮಾನತ್ತುಪಡಿಸಿಕೊಂಡ ಮುದ್ದೆಮಾಲನ್ನು ತಜ್ಞರ ಪರೀಕ್ಷೆಗಾಗಿ ಕಳುಹಿಸಿಕೊಟ್ಟಿದ್ದೇನೆ. ದಿಃ27-03-2023 ರಂದು ಚಾಸಾ-2 ರಿಂದ 6 ರವರ ಹೇಳಿಕೆಗಳನ್ನು ದಾಖಲಿಸಿಕೊಂಡಿದ್ದೇನೆ. ದಿಃ 09-06-2023 ರಂದು ಚಾಸಾ-7 ರವರಿಂದ ರಾಸಾಯನಿಕ ಪರೀಕ್ಷಾ ವರದಿ ಮತ್ತು ಮುದ್ದೆಮಾಲನ್ನು ಪಡೆದುಕೊಂಡಿದ್ದೇನೆ. ಅದುವರೆಗಿನ ತನಿಖೆಯಿಂದ ಆರೋಪ ಸಾಬೀತು ಆದ ಕಾರಣ ಅಂತಿಮ ವರದಿ ಸಲ್ಲಿಸಿದ್ದೇನೆ. ರಾಸಾಯನಿಕ ಪರೀಕ್ಷಾ ವರದಿಯನ್ನು ನಿ.ಪಿ-6 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ-6(ಎ) ಎಂದು ಗುರುತಿಸಲಾಯಿತು. ಎಂ.ಓ-1 ನ್ನು ಸಾಕ್ಷಿಯು ನೋಡಿ ಗುರುತಿಸುತ್ತಾರೆ. ನನ್ನ ಮುಂದೆ ಚಾಸಾ-3 ರವರು ನಿ.ಪಿ-5 ರಂತೆ ಹೇಳಿಕೆ ಕೊಟ್ಟಿದ್ದಾರೆ.

ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ

ನಾನು ಅಮಾನತ್ತುಪಡಿಸಿಕೊಂಡ ಮುದ್ದೆಮಾಲನ್ನು ತಜ್ಞರ ಪರೀಕ್ಷೆಗೆ ಕಳುಹಿತಸಿಲ್ಲ ಮತ್ತು ವರದಿಯನ್ನು ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ಸಾಕ್ಷಿದಾರರು ನನ್ನ ಮುಂದೆ ಯಾವುದೇ ಹೇಳಿಕೆಗಳನ್ನು ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ಚಾಸಾ-1 ರವರು ನೀಡಿದ ಸುಳ್ಳು ದೂರಿಗೆ ಪೂರಕವಾಗಿ ಅಂತಿಮ ವರದಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

<u>**ಮರುವಿಚಾರಣೆ :**</u> ಇಲ್ಲ:

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

ಓ ಹೇ ಕೇ ಸ ಇ ಎ ಒ

ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ
**ಪ್ರ.ದ.ನ್ಯಾ.ದಂ., ರವರ ನ್ಯಾಯಾಲಯ, ತರೀಕೆರೆ.**